**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲು : 17 ಸಿಡಬ್ಲು : 19

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಬಸವರಾಜ ಎಮ್ಮಿ |
| ತಂದೆಯ ಹೆಸರು | : | ಶ್ರೀ.ಮಲ್ಲಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ್ತವ್ಯ | : | ಬಸರಕೋಡ, ತಾಲೂಕುಃ ಕಿತ್ತೂರು |
| ದಿನಾಂಕ | : | 10-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮೃತ ಬಸವರಾಜ ದೊಡಮನಿ ಅವರು ನನಗೆ ಪರಿಚಯ ಇದ್ದರು. ಆರೋಪಿತರು ನನಗೆ ಪರಿಚಯ ಇರುತ್ತಾರೆ.

2. ಬಸವರಾಜ ದೊಡಮನಿ ಅವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದರು. ಸದರಿ ಬಸವರಾಜ ದೊಡಮನಿ ಅವರು 1 ಮತ್ತು 2ನೇ ಆರೋಪಿತರಿಗೆ ಸರ್ಕಾರದಿಂದ ಮನೆ ಕೊಡಿಸುವುದಾಗಿ ಹಣ ತೆಗೆದುಕೊಂಡಿದ್ದ ವಿಚಾರವಾಗಿ ಜಗಳ ಆಗಿತ್ತು, ಅದನ್ನು ನಾನು ಮತ್ತು ಚಾಸಾಃ 18 ಫ್ರಾಸಾಃ 16 ಹಸನಸಾಬ ಅವರು ಸೇರಿ ಬಗೆಹರಿಸಿದ್ದೇವು.

3. ಆರೋಪಿತರಿಗೂ ಮೃತ ಬಸವರಾಜ ದೊಡಮನಿ ಅವರಿಗೂ ಬೇರೆ ಯಾವುದೇ ವಿಚಾರದಲ್ಲಿ ಜಗಳ ಆದ ಬಗ್ಗೆ ನಾನು ಬಗೆಹರಿಸಿರುವುದಿಲ್ಲ. ಮೃತ ಬಸವರಾಜ ದೊಡಮನಿ ಅವರ ಸಾವಿನ ವಿಚಾರದಲ್ಲಿ ಪೋಲಿಸರು ನನ್ನ ಹೇಳಿಕೆಯನ್ನು

ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

" ಬಸವರಾಜ ದೊಡಮನಿ ಅವರು ಮೂರು ವರ್ಷಗಳ ಹಿಂದೆ ನಮ್ಮೂರ ಮಹಾಂತೇಶ ಪಾಗದ ಇವರ ಹೆಂಡತಿಯೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಮಹಾಂತೇಶ ಪಾಗದ ಮತ್ತು ಅವರ ಮನೆಯವರು ಬಸವರಾಜ ದೊಡಮನಿ ಇವನೊಂದಿಗೆ ತಂಟೆ ಮಾಡಿ ಸಿಟ್ಟಾಗಿದ್ದರು, ಆಗ ನಾನು ಮತ್ತು ನಮ್ಮೂರ ಹಸನಸಾಬ ಕೂಡಿ ಬಸವರಾಜ ದೊಡಮನಿ ಇವನಿಗೆ ಮಹಾಂತೇಶ ಪಾಗದ ಹಾಗೂ ಅವನ ಹೆಂಡತಿಗೆ ಬುದ್ಧಿ ಹೇಳಿ ಬಸವರಾಜ ದೊಡಮನಿ ಇವನಿಗೆ ಇನ್ನೂ ಮುಂದೆ ಆ ರೀತಿ ಅಸಭ್ಯವಾಗಿ ವರ್ತಿಸಬೇಡ ಅಂತಾ ಬುದ್ಧಿ ಹೇಳಿದ್ದೇವು." ಎಂದು ದಿನಾಂಕಃ 05-03-2020 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-72 ಎಂದು ಗುರುತಿಸಲಾಯಿತು.

2. " ಇತ್ತೀಚೆಗೆ ಬಸವರಾಜ ದೊಡಮನಿ ಇವನು ಮಹಾಂತೇಶ ಪಾಗದ ಇವನ ಅಣ್ಣನಾದ ಗೋಪಾಲ ಪಾಗದ ಇವನ ಹೆಂಡತಿ ರೇಣುಕಾ ಇವಳೊಂದಿಗೆ ಸಲುಗೆಯಿಂದ ಮಾತನಾಡುವುದು, ಸೆರೆ ಕುಡಿದು ಬಂದು ಅವರ ಮನೆಯ ಕಡೆಗೆ ಒದರಾಡುವುದು, ಚಿರಾಡುವುದು ಮಾಡುವುದಲ್ಲದೇ ರೇಣುಕಾ ಇವಳೊಂದಿಗೆ ಸಲುಗೆಯಿಂದ ಮಾತನಾಡಿಸುತ್ತಾ ಅವಳ ಕೂಡ ಅಸಭ್ಯವಾಗಿ ವರ್ತಿಸುವುದು, ಮಾತನಾಡುವುದು, ಅವಳೊಂದಿಗೆ ಮೊಬೈಲನಲ್ಲಿ ಮಾತನಾಡುವುದು, ಅವಳ ಮನೆಯ ಹಿತ್ತಲಿನಲ್ಲಿ ಬಂದು ಬಾಗಿಲು ಬಡೆಯುವುದು, ಕದ ಒದೆಯುವುದು ಮಾಡುತ್ತಿದ್ದನು, ಇದರಿಂದ ರೇಣುಕಾಳ

ಗಂಡ ಗೋಪಾಲ ಹಾಗೂ ಅವನ ತಮ್ಮ ಮಹಾಂತೇಶ ಇವರು ಬಸವರಾಜ ದೊಡಮನಿ ಇವನ ಮೇಲೆ ಸಿಟ್ಟಾಗಿ ತಂಟೆ ಮಾಡುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿರುತ್ತದೆ. " ಎಂದು ನಾನು ಪೋಲಿಸರಿಗೆ ದಿನಾಂಕಃ 05-03-2020 ರಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-72 [ಎ] ಎಂದು ಗುರುತಿಸಲಾಯಿತು.

3. ನಿಪಿ-72, ನಿಪಿ-72 [ಎ] ನಲ್ಲಿರುವ ವಿಚಾರಗಳು ಸತ್ಯವಾಗಿದ್ದು ನಾನು ಆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಮತ್ತು ಬಸವರಾಜ ದೊಡಮನಿ ಅವರ ವೈಯಕ್ತಿಕ ವಿಚಾರಗಳು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ಆರೋಪಿತರಿಗೂ, ಬಸವರಾಜ ದೊಡಮನಿ ಅವರಿಗೂ ಹಣಕಾಸಿನ ವಿಚಾರದಲ್ಲಿ ಜಗಳ ಆಗಿತ್ತು ಎನ್ನುವ ವಿಚಾರವನ್ನು ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎನ್ನುವುದು ಸರಿ.

2. 2ನೇ ಆರೋಪಿ ಮಹಾಂತೇಶ ಪಾಗದ ಸೆಂಟರಿಂಗ್ ಕೆಲಸ ಮಾಡುತ್ತಾನೆ ಮತ್ತು ಬೇರೆ ಬೇರೆ ಊರುಗಳಿಗೆ ಕೆಲಸಕ್ಕೆ ಹೋಗುತ್ತಾನೆ ಎನ್ನುವುದು ಸರಿ. 1 ಮತ್ತು 3ನೇ ಆರೋಪಿತರು ಗಂಡ ಹೆಂಡತಿಯರಾಗಿದ್ದು, ಗಂಗಾನಟ್ಟಿ ಗ್ರಾಮದಲ್ಲಿನ ಹೊಲದಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಾರೆ ಎನ್ನುವುದು ಸರಿ.

3. ನಮ್ಮೂರಿನ ಕರೆಮ್ಮ ದೇವಸ್ಥಾನದ ಹಿಂಭಾಗದಲ್ಲಿ ಸುಮಾರು 50 ಅಡಿ ಜಾಗವನ್ನು ದೇವಸ್ಥಾನಕ್ಕಾಗಿ ಬಿಡಲಾಗಿದೆ ಎನ್ನುವುದು ಸರಿ. ಸದರಿ ಜಾಗದಿಂದ 50 ಅಡಿಗಳ

ನಂತರದಲ್ಲಿ ಆರೋಪಿತರ ಮನೆಗಳು ಇವೆ ಎನ್ನುವುದು ಸರಿ. ದೇವಸ್ಥಾನದ ಹಿಂಭಾಗದ ಜಾಗಕ್ಕೆ ಹೋಗಲು ಬಸವರಾಜ ದೊಡಮನಿ ಅವರ ಮನೆಯ ಮುಂಭಾಗದಲ್ಲಿ ಹೋಗುವ ರಸ್ತೆ ಮಾತ್ರ ಇದ್ದು, ಬೇರೆ ರಸ್ತೆಗಳು ಇಲ್ಲ ಎನ್ನುವುದು ಸರಿ.

4. ಬಸವರಾಜ ದೊಡಮನಿ ಅವರಿಗೂ ಆರೋಪಿತರಿಗೂ ಹಣಕಾಸಿನ ವಿಚಾರದಲ್ಲಿ ತಕರಾರು ಇತ್ತು ಎಂದು ನಾನು ಅದನ್ನು ಬಗೆಹರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.